# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 20.06.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಹಳಷ್ಟು ಆರೋಗ್ಯ ಕೇಂದ್ರಗಳು ಆಸ್ಪತ್ರೆ, ನರ್ಸಿಂಗ್ ಹೋಂ, ರಕ್ತ ನಿಧಿ, ಲ್ಯಾಬೋರೇಟರಿ, ದಂತ ಚಿಕಿತ್ಸಾಲಯಗಳು ಇತ್ಯಾದಿ, ಇದ್ದು ಇಲ್ಲಿ ಉತ್ಪತ್ತಿಯಾಗುವ ಜೈವಿಕ ತ್ಯಾಜ್ಯ ವಸ್ತುಗಳನ್ನು ಘನ ತ್ಯಾಜ್ಯ ವಸ್ತುಗಳ ಜೊತೆಗೆ ನೀಡುತ್ತಿರುವುದು ಕಂಡುಬಂದಿದೆ.

ಆದ್ದರಿಂದ, ಕೇಂದ್ರ ಸರ್ಕಾರವು ಈ ಪರಿಸ್ಥಿತಿಯನ್ನು ವೈಜ್ಞಾನಿಕವಾಗಿ ನಿಯಂತ್ರಿಸಲು ಮುಂದಾಗಿದ್ದು, ಬಯೋ ಮೆಡಿಕಲ್ ವೇಸ್ಟ್ ರೂಲ್ಸ್ 1998 ನಿಯಮವನ್ನು ಅನುಷ್ಠಾನಗೊಳಿಸಲು ಆದೇಶಿಸಿರುತ್ತದೆ. ಈ ವಿಷಯಗಳಿಗೆ ಸಂಬಂಧಪಟ್ಟಂತೆ, ಸಂಪೂರ್ಣ ಮಾಹಿತಿಯನ್ನು ದಿನಾಂಕ: 15.12.2010 ರಂದು ದಿನಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ ದಿನಾಂಕ: 31.01.2011 ರೊಳಗಾಗಿ ಪರವಾನಗಿಗಳನ್ನು ಪಡೆಯಲು ಸೂಚಿಸಲಾಗಿತ್ತು. ಪುನಃ ದಿನಾಂಕ: 28.02.2011 ರಂದು ಪ್ರಕಟಣೆ ಹೊರಡಿಸಿ ದಿನಾಂಕ: 28.02.2011 ರೊಳಗಾಗಿ ಪರವಾನಗಿಯನ್ನು ಪಡೆಯಬೇಕೆಂದು ಪ್ರಕಟಣೆಯಲ್ಲಿ ಸೂಚಿಸಲಾಗಿತ್ತು.

ಆದರೆ ಕೆಲವು ಆರೋಗ್ಯ ಕೇಂದ್ರಗಳು ಪರವಾನಗಿಯನ್ನು ಪಡೆಯದೇ ನಡೆಸುತ್ತಿರುವುದು ಕಂಡು ಬಂದಿದ್ದು, ಇದೇ ಅಂತಿಮ ಬಾರಿಗೆ ಅನಧಿಕೃತವಾಗಿ ಪರವಾನಗಿಯನ್ನು ಪಡೆಯದೇ ನಡೆಸುತ್ತಿರುವ ಆರೋಗ್ಯ ಕೇಂದ್ರಗಳಿಗೆ ಈ ಮೂಲಕ ತಿಳಿಸುವುದೇನೆಂದರೆ **ದಿನಾಂಕ: 30.06.2011 ರೊಳಗಾಗಿ ಕರ್ನಾಟಕ ಮುನಿಸಿಪಲ್ ಕಾಯ್ದೆ ನಿಯಮ 1976 ಸೆಕ್ಷನ್ 374 ರಂತೆ ಪಾಲಿಕೆ ವತಿಯಿಂದ ಆರೋಗ್ಯ ಪರವಾನಗಿಯನ್ನು ಪಡೆಯಬೇಕೆಂದು ಸೂಚಿಸಿದೆ. ತಪ್ಪಿದಲ್ಲಿ ಅನಧಿಕೃತವಾಗಿ ನಡೆಸುತ್ತಿರುವ ಎಲ್ಲಾ ಆರೋಗ್ಯ ಕೇಂದ್ರಗಳನ್ನು ಪಾಲಿಕೆ ವತಿಯಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು, ಪಾಲಿಕೆ ವತಿಯಿಂದ ಪರವಾನಗಿಯನ್ನು ಪಡೆಯಲು ಈ ಕೆಳಕಂಡಂತೆ ದಾಖಲೆಗಳನ್ನು ನೀಡಲು** ಉಪ ಆಯುಕ್ತರು (ಆರೋಗ್ಯ) ರವರು ಈ ಮೂಲಕ ಅಂತಿಮವಾಗಿ ತಿಳಿಸಿದ್ದಾರೆ.

ಪರವಾನಗಿ ಪಡೆಯಲು ನೀಡಬೇಕಾಗಿರುವ ದಾಖಲೆಗಳು:-

1) ಹೊಸದಾಗಿ ತೆರೆದಿರುವ ಆರೋಗ್ಯ ಕೇಂದ್ರಕ್ಕೆ ಪರವಾನಗಿಯನ್ನು ಪಡೆಯಲು:-
   1) ಈ ತಹಲ್ ತನಕ ಪಾವತಿಸಿರುವ ಕಂದಾಯದ ರಸೀದಿ.
   2) ಮಾಲೀಕರಿಂದ ಒಪ್ಪಿಗೆ ಪತ್ರ.
   3) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಒಪ್ಪಿಗೆ ಪತ್ರ.
   4) 1 ವರ್ಷದ ಪರವಾನಗಿ ಶುಲ್ಕ.
   5) ಘನ ತ್ಯಾಜ್ಯ ವಿಲೇವಾರಿ ಶುಲ್ಕ.

2) ಈಗಾಗಲೇ ನಡೆಯುತ್ತಿರುವ ಹಳೇ ಆರೋಗ್ಯ ಕೇಂದ್ರಕ್ಕೆ ಪರವಾನಗಿ ಪಡೆಯಲು:-
   1) 2 ರಷ್ಟು ಪರವಾನಗಿ ಶುಲ್ಕದ ಮೊತ್ತ.
   2) ಘನ ತ್ಯಾಜ್ಯ ವಿಲೇವಾರಿ ಶುಲ್ಕ.
   3) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪತ್ರ.
   4) ಜೈವಿಕ ತ್ಯಾಜ್ಯ ವಿಲೇವಾರಿ ಮಾಡಲು ರಾಮ್‌ಕೀ ಮತ್ತು ಮರಡಿ ಸಂಸ್ಥೆ ವತಿಯಿಂದ ಮಾಡಿಕೊಂಡಿರುವ ಕರಾರು ಪತ್ರ ದಿನಾಂಕ: 31.03.2012 ರ ತನಕ.

3) ಅಧಿಕೃತವಾಗಿ ನಡೆಯುತ್ತಿರುವ ಆರೋಗ್ಯ ಕೇಂದ್ರಗಳಿಗೆ ಪಡೆಯಲು:-
   1) ಜೈವಿಕ ತ್ಯಾಜ್ಯ ವಿಲೇವಾರಿ ಮಾಡಲು ರಾಮ್‌ಕೀ ಮತ್ತು ಮರಡಿ ಸಂಘಗಳ ಜೊತೆ ಮಾಡಿಕೊಂಡಿರುವ ಒಪ್ಪಿಗೆ ಪತ್ರ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 20.06.2011**

ಘನ ಉಚ್ಛ ನ್ಯಾಯಾಲಯವು ನ್ಯಾಯಾಲಯ ನಿಂದನಾ ಪ್ರಕರಣ ಒಂದರಲ್ಲಿ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನ್ಯಾಯಾಲಯದಲ್ಲಿ ವಿಚಾರಣೆಯ ದಿನಗಳಂದು ಹಾಜರಾತಿ ಸಲ್ಲಿಸದ ಕಾರಣ ಆಯುಕ್ತರ ವಿರುದ್ಧ ದಿನಾಂಕ: 10.06.2010 ರಲ್ಲಿ ವಾರೆಂಟ್ ಹೊರಡಿಸಲಾಗಿದ್ದುದು ಸರಿಯಷ್ಟೆ. ವಿಷಯದಲ್ಲಿ ಪಾಲಿಕೆಯು ತೆಗೆದುಕೊಳ್ಳಲಾದ ಕ್ರಮಗಳನ್ನು ಆಯುಕ್ತರು ದಿನಾಂಕ: 20.06.2011 ರಲ್ಲಿ ನ್ಯಾಯಾಲಯಕ್ಕೆ ಖುದ್ದಾಗಿ ಹಾಜರಾಗಿ ಮಾನ್ಯ ನ್ಯಾಯಾಲಯಕ್ಕೆ ಮನವರಿಕೆ ಮಾಡಲಾಗಿ ಘನ ಉಚ್ಛ ನ್ಯಾಯಾಲಯವು ಆಯುಕ್ತರ ವಿರುದ್ಧ ಹೊರಡಿಸಲಾದ ವಾರೆಂಟ್‌ಗಳನ್ನು ಹಿಂದಕ್ಕೆ ಪಡೆಯಲಾಗಿರುತ್ತದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**